1	2	3	4	5
2.	ಸುಂದರಬಾಬು	742	5.00	ಇವರು ತಡೆ ಆಜ್ಞೆ ಪಡೆದು ಕೆಲಸ ನಿರ್ವಹಿಸುತ್ತಿದ್ದಾರೆ.
3.	ಸುಂದರಬಾಬು	743	5.00	ಇವರು ತಡೆ ಆಜ್ಞೆ ಪಡೆದು ಕೆಲಸ ನಿರ್ವಹಿಸುತ್ತಿದ್ದಾರೆ.
4.	ಇ. ಹನುಮಂತಪ್ಪ	831	5.00	ನೋಟೀಸ್ ಜಾರಿ ಮಾಡಲಾಗಿದೆ.
5.	ಎಂ.ಸಿ. ನಾರಾಯಣ ಸ್ವಾಮಿ	827	3.10	ನೋಟೀಸ್ ಜಾರಿ ಮಾಡಲಾಗಿದೆ.
6.	ಎಸ್. ರಾಜು	799	2.00	ಅವಧಿ ಮುಗಿದಿರುತ್ತದೆ.

ಸಿಂಧಗಿ ತಾಲ್ಲೂಕಿನಲ್ಲಿ ಬೆಳ್ಳ ಬೆಳಕು ಯೋಜನೆ

1350 (1627) ಶ್ರೀ ಸುಣಗಾರ ಶರಣಪ್ಪ ತಿಪ್ಪಣ್ಣ (ಸಿಂಧಗಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಿಂಧಗಿ ತಾಲ್ಲೂಕಿನಲ್ಲಿ ಡವಳಾರಿ, ಯಲಗೋಡ ಗ್ರಾಮಗಳಿಗೆ ತಲಾ 50 ಮನೆಗಳನ್ನು ಬೆಳ್ಳಬೆಳಕು ಯೋಜನೆಯ ಅಡಿಯಲ್ಲಿ ಮಂಜೂರಾತಿಗಾಗಿ ಸಲ್ಲಿಸಿದ ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ;

ಆ) ಸಲ್ಲಿಸಿದ್ದರೆ, ಮಂಜೂರಾದ ಮನೆಗಳು ಎಷ್ಟು;

ಇ) ಮಂಜೂರಾದ ಮನೆಗಳಿಗೆ ನಿಗಧಿಪಡಿಸಿ ಬಿಡುಗಡೆ ಮಾಡಿದ ಹಣವೆಷ್ಟು;

ಈ) ಪ್ರತಿ ವರ್ಷ ಈ ಯೋಜನೆಯ ಅಡಿಯಲ್ಲಿ ಪ್ರತಿ ಮತಕ್ಷೇತ್ರಕ್ಕೆ ನಿಗಧಿಪಡಿಸಿ ಮನೆಗಳು ಎಷ್ಟು;

ಉ) ಪ್ರತಿ ವರ್ಷ ನಿಗಧಿಪಡಿಸಿರುವ ಮನೆಗಳಲ್ಲಿ ಸಿಂಧಗಿ ಮತಕ್ಷೇತ್ರಕ್ಕೆ ನೀಡಿದ ಮನೆಗಳ ಸಂಖ್ಯೆ ಎಷ್ಟು;

ಊ) ಹೊಸ ಪ್ರಸ್ತಾವನೆ ಬಂದಲ್ಲಿ ಇನ್ನುಳಿದ ಮನೆಗಳನ್ನು ಸರ್ಕಾರ ಮಂಜೂರಾತಿ ಮಂಜೂರಾತಿ ನೀಡುವ ಉದ್ದೇಶ ಹೊಂದಿದೆಯೇ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಈ ಎರಡು ಗ್ರಾಮಗಳಿಗೆ ತಲಾ 50 ಮನೆಗಳನ್ನು ಬೆಳ್ಳಬೆಳಕು ಯೋಜನೆಯಡಿ ಮಂಜೂರು ಮಾಡಲು ಪ್ರಸ್ತಾವನೆ ಹಿಂದುಳಿದ ವರ್ಗಗಳ ಇಲಾಖೆಯ ಆಯುಕ್ತರಿಗೆ ಬಂದಿದೆ.

ಅ) ಸಿಂಧಗಿ ತಾಲ್ಲೂಕಿನ ಡವಳಾರ ಗ್ರಾಮಕ್ಕೆ 20 ಮನೆಗಳು, ಯಲಗೋಡ ಗ್ರಾಮಕ್ಕೆ 20 ಮನೆಗಳು ನಿರ್ಮಾಣ ಮಾಡಲು ಮಂಜೂರಾತಿ ನೀಡಲಾಗಿದೆ.

ಇ) ಸರ್ಕಾರ ನಿಗಧಿಪಡಿಸಿರುವ ಘಟಕ ವೆಚ್ಚದ ಆನ್ವಯ ಪ್ರತಿ ಮನೆಗೆ ರೂ.20,000 ದಂತೆ ದವಳಾರಕ್ಕೆ ರೂ.4.00 ಲಕ್ಷ ಹಾಗೂ ಯಲಗೋಡ ಗ್ರಾಮಕ್ಕೆ ರೂ.4.00 ಲಕ್ಷ ಬಿಡುಗಡೆ ಮಾಡಲಾಗಿದೆ.

ಈ) ಪ್ರತಿ ಮತ ಕ್ಷೇತ್ರಕ್ಕೆ ಪ್ರತ್ಯೇಕವಾಗಿ ನಿರ್ಮಾಣ ಮಾಡಲಾಗುವ ಮನೆಗಳ ಸಂಖ್ಯೆಯನ್ನು ನಿಗಿಧಿಪಡಿಸಿರುವುದಿಲ್ಲ.

ಉ) ಉದ್ಭವಿಸುವುದಿಲ್ಲ

ಊ) ಹೊಸ ಪ್ರಸ್ತಾವನೆಗಳು ಬಂದಲ್ಲಿ ಲಭ್ಯವಿರುವ ಆಯವ್ಯಯವನ್ನು ಅನುಸರಿಸಿ ಕ್ರಮ ತೆಗೆದುಕೊಳ್ಳಲಾಗುವುದು.

ಬೆಂಗಳೂರು ಬಳಿಯ ಬೆಳ್ಳಂದೂರು ಗ್ರಾಮದ ಸುತ್ತ ಮುತ್ತ
ಕೃಷಿ ಭೂಮಿಯನ್ನು ಸ್ವಾಧೀನ ಪಡಿಸಿರುವುದು

1351 (1644) ಶ್ರೀ ವಿಶ್ವೇಶ್ವರ ಹೆಗಡೆ ಕಾಗೆರಿ (ಅಂಕೋಲ): ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ಸಮೀಪ 13 ಕಿ.ಮೀ. ಬೆಳ್ಳಂದೂರು ಗ್ರಾಮದ ಸುತ್ತಲಿನ ಐದಾರು ಗ್ರಾಮಗಳ ರೈತರ ಕೃಷಿಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಸರ್ಕಾರ ಆದೇಶಿಸಿರುವುದು ನಿಜವೇ?

ಆ) 1) ಐಟಿಬಿಟಿ ಹೆಸರಿನಲ್ಲಿ ಕೈಗಾರಿಕಾ ಇಲಾಖೆ ಭೂ ಸ್ವಾಧೀನ ಮಾಡಿಕೊಳ್ಳಬಹುದೇ;

2) ಎಷ್ಟು ಎಕರೆ ಪ್ರದೇಶವನ್ನು ಪಶಪಡಿಸಿ ಕೊಳ್ಳಲು ಉದ್ದೇಶಿಸಲಾಗಿದೆ?

ಇ) ಯಾವ ಕಾರಣಕ್ಕಾಗಿ ಸರ್ಕಾರ ಜಮೀನು ಸ್ವಾಧೀನಕ್ಕೆ ಮುಂದಾಗಿದೆ?

ಈ) ಹೈಕೋರ್ಟ್ ಆದೇಶದ ಹಾಗೂ ಕಂದಾಯ ಇಲಾಖೆಯ ಅಭಿಪ್ರಾಯಕ್ಕೆ ವಿರುದ್ಧವಾದ ಕ್ರಮವೆಂದು ಸರ್ಕಾರ ತಿಳಿದಿಲ್ಲವೇ?

ಉ) ವಶಪಡಿಸಿಕೊಳ್ಳಲಿರುವ ಜಾಗವನ್ನು ಯಾರ ವಶಕ್ಕೆ ನೀಡಲಾಗುವುದು ಹಾಗೂ ಯಾವ ಯೋಜನೆದಾಗಿ ಎಂಬುದನ್ನು ವಿವರ ಸಹಿತ ಒದಗಿಸಿ;

ಊ) ಇದು ಹಸಿರು ಪಟ್ಟಿ ವಲಯ ನಿರ್ಬಂಧವನ್ನು ಸರ್ಕಾರ ಉಲ್ಲಂಘಿಸಿದಂತಾಗುತ್ತದೆಯಲ್ಲವೇ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ಹೌದು.

ಆ) 1. ಕೆಐಎಡಿಬಿ ಕಾಯ್ದೆ 1966ರ ಅಡಿಯಲ್ಲಿ ಕೈಗಾರಿಕಾ ಇಲಾಖೆಯು ಕೈಗಾರಿಕಾ ಉದ್ದೇಶಕ್ಕಾಗಿ ಭೂಸ್ವಾಧೀನಮಾಡಿಕೊಳ್ಳಬಹುದಾಗಿದೆ.

2. ಒಟ್ಟು 607 ಎಕರೆ 25 ಗುಂಟೆ ಜಮೀನನ್ನು ವಶಪಡಿಸಿಕೊಳ್ಳಲು ಉದ್ದೇಶಿಸಲಾಗಿದೆ.

ಇ) ಐ.ಟಿ,.ಉದ್ದಿಮೆ ಸ್ಥಾಪಿಸಲು ಬಯಸುವ ಕಂಪನಿಗಳಿಗೆ ಉನ್ನತಮಟ್ಟದ ಸಭೆಯ ಅಥವಾ ರಾಜ್ಯಮಟ್ಟದ ಏಕಗವಾಷಿ ಸಮಿತಿ ಸಭೆಯ ನಿರ್ಣಯಗಳ ಮೇಲೆ ಹಂಚಿಕೆ ಮಾಡಲು ಜಮೀನುಗಳನ್ನು ಸ್ವಾಧೀನ ಮಾಡಿಕೊಳ್ಳಲು ಮುಂದಾಗಿದೆ.